




5

ಮನೆ ತುಂಬ ಆಟಿಕೆಗಳು
ಚೆಲ್ಲಾಪಿಲ್ಲಿ
SORT ಮಾಡುವುದಿದೆ ಎಂದು
ಕೈ ಹಚ್ಚಿರಲಿಲ್ಲ

ಇಂದು ನೀನು ಬರುವ ಗಳಿಗೆ
ದೊಡ್ಡದೊಂದು ಬಾಕ್ಸಿನಲ್ಲಿ
ಹಾಗೆ ಹಾಗೇ ತುಂಬಿಟ್ಟೆ

SHUFFLE ಆಗಿ ಹೋಗಿದೆ ಎಲ್ಲ.

ಒಳಗೂ ಹಾಗೇ.

6

ನಿನ್ನ ದನಿಗೆ ಮುನ್ನ
ಉಸಿರು ಬಂದು ತಲುಪಿತು

ನೋಟಕ್ಕೆ ಮೊದಲು ಮತ್ತು
ಸ್ಪರ್ಶಕ್ಕೆ ಮೊದಲು ಚಿತ್ರ

ಹೊಟ್ಟೆಗೆ ಕಟ್ಟಿ ಕೂತು
ಇಂಚಿಂಚಿಂಚು ಮುತ್ತಿಕೊಂಡ ದುಂಬಿಯ ಹಾಗೆ
ಶಿಶಿರದಲ್ಲಿ
ವಸಂತನ ಆಗಮನ

ಚೂರು ಮುಂಚೇ ಆಗಬೇಕಿತ್ತು
ತುಸು ತಡೆದು ಬರಬೇಕಿತ್ತು
ಎಂಬುದೆಲ್ಲ ಸುಳ್ಳು

ಆಗಸಕ್ಕೆ ಕೈ ಚಾಚಿ ನಿಂತ
ಶರದೃತು ವೃಕ್ಷದ ಒಳಗೆ
ರಭಸದಿಂದ ಮುನ್ನುಗ್ಗುತ್ತಿರುವ
ನದಿ.
ಉಕ್ಕು.